**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **695(688)** |
| ಸದಸ್ಯರ ಹೆಸರು | : | ಶ್ರೀಮತಿ ಡಾ|| ಉಮಾಶ್ರೀ (ನಾಮನಿರ್ದೇಶಿತರು) |
| ಉತ್ತರಿಸುವ ದಿನಾಂಕ | : | 18.08.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ವಿವರ |
|---|---|---|
| ಅ) | ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಅನುದಾನಿತ ಶಾಲೆಗಳಲ್ಲಿ ಕುಸಿತ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ 5 ವರ್ಷಗಳಲ್ಲಿ ಎಷ್ಟು ಶೇಕಡಾ ಫಲಿತಾಂಶ ಕಡಿಮೆಯಾಗಿದೆ; ಎಸ್.ಎಸ್.ಎಲ್.ಸಿ ಫಲಿತಾಂಶ ಹೆಚ್ಚಿಸಲು ಸರ್ಕಾರ ಯಾವ ರೀತಿ ಕ್ರಮಕೈಗೊಂಡಿದೆ; | ಹೌದು. ಬಂದಿರುತ್ತದೆ.<br><br>ಕಳೆದ 5 ವರ್ಷಗಳ ಫಲಿತಾಂಶ ಈ ಕೆಳಕಂಡಂತೆ ಇರುತ್ತದೆ.<br><br>ವರ್ಷ — ಶೇಕಡವಾರು ಫಲಿತಾಂಶ<br>2020-21 — 100%<br>2021-22 — 88.03%<br>2022-23 — 85.64%<br>2023-24 — 82.55%<br>2024-25 — 75.04%<br><br>**2025-26ನೇ ಸಾಲಿನಲ್ಲಿ SSLC ಫಲಿತಾಂಶ ಸುಧಾರಣೆಗೆ ಕೈಗೊಳ್ಳಲಾಗುವ ಕ್ರಮಗಳು:**<br><br>1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 215 ಎಸ್ಎಲ್‌ಬಿ 2025 ದಿನಾಂಕ: 01.07.2025 ರಲ್ಲಿ 2025-26ನೇ ಸಾಲಿನ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯ ಫಲಿತಾಂಶ ವೃದ್ಧಿಗಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು 29 ಅಂಶಗಳ ಸೂಚನೆ ನೀಡಿದ್ದು, ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನವಾಗುತ್ತಿದೆ.<br><br>2. 2024-25ನೇ ಸಾಲಿನಲ್ಲಿ ಪ್ರಕಟವಾಗಿರುವ ಫಲಿತಾಂಶವನ್ನು ಪರೀಕ್ಷಾ ಮಂಡಳಿ ಮತ್ತು ಡಿ.ಎಸ್.ಇ.ಆರ್.ಟಿ. ಯಿಂದ ವಿಶ್ಲೇಷಿಸಿ ಒಟ್ಟಾರೆಯಾಗಿ ಯಾವ ವಿಷಯದಲ್ಲಿ ಮತ್ತು ಆ ವಿಷಯಗಳ ಯಾವ ನಿರ್ದಿಷ್ಟ ಕಲಿಕಾಂಶಗಳಲ್ಲಿ ಕಡಿಮೆ ಸಾಧನೆ ಆಗಿದೆ ಎಂಬುದನ್ನು ಕಂಡು ಹಿಡಿದು, ಆ ನಿರ್ದಿಷ್ಟ ಕಲಿಕಾಂಶಗಳಬೋಧನೆ/ಕಲಿಕೆಗಳ ಕುರಿತು ಅವಶ್ಯ ಕ್ರಮವಹಿಸಲಾಗುವುದು.<br><br>3. ಪ್ರಸ್ತುತ 9 ನೇ ತರಗತಿಯಿಂದ 10 ನೇ ತರಗತಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಸೇತು ಬಂಧ |

ಕಾರ್ಯಕ್ರಮವನ್ನು ನಡೆಸಿ, ಆ ಮಕ್ಕಳ ಪ್ರವೇಶ ಕಲಿಕಾಂಶಗಳ ಸಾಧನೆಯನ್ನು ಪತ್ತೆ ಹಚ್ಚಿ, ವಿದ್ಯಾರ್ಥಿಗಳಲ್ಲಿ ಸಾಧನೆಯಾಗದ ಕಲಿಕಾಂಶಗಳನ್ನು ಕಲಿಸಲು ಪರಿಹಾರ ಬೋಧನೆ ಕೈಗೊಳ್ಳಲಾಗುವುದು. ಈ ಕುರಿತು ಡಿ.ಎಸ್.ಇ. ಆರ್.ಟಿ. ವತಿಯಿಂದ ಕ್ರಮವಹಿಸಲಾಗುವುದು.

4. 2025-26 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 111 ರಂತೆ ವಿದ್ಯಾರ್ಥಿಗಳು, ಆಯಾ ತರಗತಿಗೆ ತಕ್ಕಂತೆ ಕಲಿಕೆಯ ಮಟ್ಟವನ್ನು ಹೊಂದುವ ನಿಟ್ಟಿನಲ್ಲಿ 111(V) ರಂತೆ ಸರ್ಕಾರಿ ಶಾಲೆಗಳಲ್ಲಿ ಅತೀ ಕಡಿಮೆ ಕಲಿಕಾ ಸ್ತರದಲ್ಲಿರುವ 6 ರಿಂದ 10 ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹೆಚ್ಚಿಸುವ ಮರುಸಿಂಚನ ಕಾರ್ಯಕ್ರಮವನ್ನು ರಾಜ್ಯಾದ್ಯಂತ ವಿಸ್ತರಿಸಲಾಗುವುದು.

5. ಶಾಲೆಗಳಲ್ಲಿ ದಾಖಲಾದ ಮಕ್ಕಳು ನಿರಂತರವಾಗಿ ಶಾಲೆಗಳಿಗೆ ಹಾಜರಾಗುವಂತೆ ಕ್ರಮವಹಿಸಲಾಗುವುದು. ಅದರಲ್ಲೂ ಪ್ರಮುಖವಾಗಿ ಹತ್ತನೇ ತರಗತಿಯಲ್ಲಿ ದಾಖಲಾದವರಲ್ಲಿ ಮೇಲಿನಿಂದ ಮೇಲೆ ಗೈರು ಹಾಜರಾಗುತ್ತಿರುವ ವಿದ್ಯಾರ್ಥಿಗಳನ್ನು ಮರಳಿ ಶಾಲೆಗೆ ತರುವ ಕುರಿತು ಪೋಷಕರನ್ನು ಸಂಪರ್ಕಿಸಿ ಕ್ರಮಕೈಗೊಳ್ಳಲು ತಿಳಿಸಲಾಗುವುದು.

6. ಪ್ರಸ್ತುತ ವರ್ಷ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಸುತ್ತೋಲೆ ಸಂಖ್ಯೆ: E—59908DSERT/ EVG/ಪಾ.ಅ.ಮೌ(LBA)/2025-26 di: 16.7.2025ರಲ್ಲಿ ಶಾಲೆಗಳಲ್ಲಿ ಡಿ.ಎಸ್. ಇ. ಆರ್.ಟಿ. ವತಿಯಿಂದ ಅಧ್ಯಾಯ ಆಧಾರಿತ ಮೌಲ್ಯಾಂಕನ (Lesson Based Assessment) ಕೈಗೊಳ್ಳಲಾಗುವುದು. ಇದರಿಂದ ಯಾವುದೇ ವಿದ್ಯಾರ್ಥಿಗಳು ಆಯಾ ಪಾಠದಲ್ಲಿನ ಕಲಿಕಾಂಶಗಳನ್ನು ಪಡೆದುಕೊಳ್ಳದೇ ಇದ್ದಲ್ಲಿ, ಆ ಕಲಿಕಾಂಶಗಳನ್ನು ಅದೇ ಸಂದರ್ಭದಲ್ಲಿ ಕಲಿಯಲು ಶಿಕ್ಷಕರು ಪರಿಹಾರಾತ್ಮಕ ಕ್ರಮಗಳನ್ನು ಕೈಗೊಂಡು ಮುಂದೆ ಸಾಗಲು ತಿಳಿಸಲಾಗುವುದು.

7. ಶಾಲೆಗಳಲ್ಲಿ ವಾರಾಂತ್ಯದಲ್ಲಿ ನಡೆಸುತ್ತಿರುವ ಘಟಕ ಪರೀಕ್ಷೆ / ಇತರ ಪರೀಕ್ಷೆಗಳ ಫಲಿತಾಂಶವನ್ನು ವಿಶ್ಲೇಷಿಸಲು ಡಿ.ಎಸ್.ಇ. ಆರ್.ಟಿ. ವತಿಯಿಂದ ಕ್ರಮವಹಿಸಲಾಗುವುದು. ಇದರಿಂದ ನಿಧಾನ

| | | |
|---|---|---|
| | | ಕಲಿಕೆಯುಳ್ಳ ಮತ್ತು ಕಡಿಮೆ ಸಾಧನೆ ಮಾಡಿರುವ ವಿದ್ಯಾರ್ಥಿಗಳ ಕಲಿಕಾ ಪ್ರಗತಿ ಕುರಿತು ಪ್ರತಿ ವಾರ ನಿರಂತರ ಅನುಪಾಲನೆ ಮಾಡಿ ಸದರಿ ವಿದ್ಯಾರ್ಥಿಗಳ ಫಲಿತಾಂಶ ಸುಧಾರಿಸಲು ಕ್ರಮವಹಿಸಲಾಗುವುದು.<br>8. ಗುಣಮಟ್ಟದ ಫಲಿತಾಂಶ ಪಡೆಯಲು ವಿವಿಧ ಹಂತಗಳಲ್ಲಿ ಅಂದರೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರು, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಸಿ.ಇ.ಓ ರವರಿಂದ, ನಿರ್ದೇಶಕರು (ಪ್ರೌಢ) ರವರಿಂದ ಮತ್ತು ಆಯಾ ಜಿಲ್ಲಾ ಉಪನಿರ್ದೇಶಕರು ಮತ್ತು ಬಿ.ಇ.ಓ. ರವರ ಹಂತಗಳಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ ಕ್ರಮವಹಿಸಲಾಗುತ್ತಿದೆ.<br>9. ಸೇತುಬಂಧ ಮೌಲ್ಯಮಾಪನ ಆಧಾರದ ಮೇಲೆ ಗುರುತಿಸಲ್ಪಟ್ಟ ವಿದ್ಯಾರ್ಥಿಗಳಿಗೆ ವಿಶೇಷ ಬೋಧನಾ ತರಗತಿಗಳನ್ನು ನಡೆಸಲಾಗುತ್ತಿದೆ.<br>10. ಕ್ಲಿಷ್ಟ ಪರಿಕಲ್ಪನೆಗಳನ್ನು ಗುರುತಿಸಿ ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸಲು ಶಾಲೆಯ ಅವಧಿಯ ಮೊದಲು ಮತ್ತು ಶಾಲಾ ಅವಧಿಯ ನಂತರ ಶಾಲೆಯಲ್ಲಿಯೇ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ.<br>11. ಆಯಾ ತರಗತಿ ನಿರ್ದಿಷ್ಟ ಕಲಿಕಾ ಫಲಗಳನ್ನು ವಿದ್ಯಾರ್ಥಿಗಳು ಸಾಧಿಸುವಂತಾಗಲು ಒಂದನೇ ತರಗತಿಯಿಂದಲೇ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.<br>ಫಲಿತಾಂಶವನ್ನು ಉತ್ತಮಪಡಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಶಿಕ್ಷಕರಿಗೆ ಶಾಲಾ ದಿನಗಳನ್ನು ಹೊರತುಪಡಿಸಿ ಪುನಶ್ಚೇತನಾ ತರಬೇತಿಗಳನ್ನು ಆಯೋಜಿಸಲಾಗುವುದು. |
| ಆ) | ಎಸ್.ಎಸ್.ಎಲ್.ಸಿ ಫಲಿತಾಂಶ ಹೆಚ್ಚಿಸಲು ಸರ್ಕಾರಿ ಶಾಲಾ ಶಿಕ್ಷಕರಿಗೆ ಟಾಸ್ಕ್ ನೀಡಲಾಗಿದೆಯೇ; ನೀಡಿದ್ದಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಹೆಚ್ಚಾಗಿದೆಯೇ; ಎಷ್ಟು ಫಲಿತಾಂಶ ಹೆಚ್ಚಾಗಿದೆ; | 2024-25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗೆ ಸುತ್ತೋಲೆ ಸಂಖ್ಯೆ: ಇಪಿ 272 ಎಸ್‌ಎಲ್‌ಬಿ 2024 ದಿನಾಂಕ: 29.08.2024 ರಲ್ಲಿ 20 ಅಂಶಗಳ ಸೂಚನೆಗಳನ್ನು ನೀಡಿ ಅವುಗಳನ್ನು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ತಿಳಿಸಲಾಗಿರುತ್ತದೆ. ಅದರಂತೆ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಸಭೆ ನಡೆಸಿರುತ್ತಾರೆ. |

2024 ರ ನವಂಬರ್ ಮಾಹೆಯಿಂದ ಮೇಲಿಂದ ಮೇಲೆ ಉಪನಿರ್ದೇಶಕರು(ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರೊಂದಿಗೆ ಎಸ್.ಎಸ್.ಎಲ್.ಸಿ ಗುಣಮಟ್ಟದ ಫಲಿತಾಂಶಕ್ಕೆ ಪ್ರಗತಿ ಪರಿಶೀಲನಾ ಸಭೆಗಳನ್ನು ಆಯೋಜಿಸಲಾಗಿರುತ್ತದೆ.

ಈ ಮೇಲಿನ ಅಂಶಗಳಂತೆ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶವನ್ನು ಸುಧಾರಣೆಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗಿದ್ದರೂ, ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ ಒಟ್ಟಾರೆ ಫಲಿತಾಂಶ ಈ ಕೆಳಗಿನಂತೆ ಬಂದಿರುತ್ತದೆ.

| **ಶಾಲೆಯ ವಿಧ** | **ಶೇಕಡವಾರು ಫಲಿತಾಂಶ** |
|---|---|
| ಸರ್ಕಾರಿ | 62.7% |
| ಖಾಸಗಿ ಅನುದಾನಿತ | 58.97% |

**<u>2023-24ನೇ ಸಾಲಿನ ಹಾಗೂ 2024-25ನೇ ಸಾಲಿನ ಎಸ್.ಎಸ್.ಎಲ್.ಸಿ ಪ್ರಥಮ ಪರೀಕ್ಷೆಗಳ ತುಲನಾತ್ಮಕ ತಖ್ತೆ:</u>**

2023-2024 ನೇ ಸಾಲಿನಲ್ಲಿ ಪ್ರಪ್ರಥಮ ಬಾರಿಗೆ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿಗಳ ಮೂಲಕ ವೆಬ್ ಕಾಸ್ಟಿಂಗ್ ಮಾಡುವ ಹೊಸ ಪದ್ಧತಿಯನ್ನು ಪರಿಚಯಿಸಲಾಗಿತ್ತು. ಪರೀಕ್ಷಾ ಕೊಠಡಿಗಳ ದೃಶ್ಯಾವಳಿಗಳನ್ನು ಮೇಲ್ವಿಚಾರಣೆ ಮಾಡಲು ಎಲ್ಲಾ ಜಿಲ್ಲೆಗಳಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿತ್ತು. ಈ ನಾವೀನ್ಯ ಕ್ರಮವು ವಿನೂತನವಾಗಿದ್ದು, ಪರೀಕ್ಷೆಯ ಸಮಗ್ರತೆಯನ್ನು ಪುನರ್ ಸ್ಥಾಪಿಸಲು ಸಹಾಯಕವಾಗಿದೆ. ಈ ಮೂಲಕ ಪರೀಕ್ಷಾ ಅಕ್ರಮಗಳನ್ನು ಆಶ್ರಯಿಸದೆ ಪರೀಕ್ಷೆಗಳನ್ನು ಬರೆಯುವ ಅಭ್ಯಾಸವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಸಫಲವಾಗಿದ್ದು, ಈ ಕ್ರಮವನ್ನು ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರನ್ನೊಳಗೊಂಡಂತೆ ಎಲ್ಲಾ ಭಾಗೀದಾರರು ಸ್ವಾಗತಿಸಿದ್ದಾರೆ.

ಆದರೆ, ಒಟ್ಟಾರೆ ಫಲಿತಾಂಶ ಕಳೆದ ವರ್ಷಕ್ಕಿಂತ [2022-23] ಶೇ. 30ರಷ್ಟು ಕಡಿಮೆಯಾಗಿತ್ತು. ಮೊದಲ ಬಾರಿಗೆ ವೆಬ್ ಕಾಸ್ಟಿಂಗ್ ವಿಧಾನವನ್ನು ಪರಿಚಯಿಸಿದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೇಕಡಾ 20% ಗ್ರೇಸ್ ಅಂಕಗಳನ್ನು ನೀಡಲು ಸರ್ಕಾರ ನಿರ್ಧರಿಸಿತ್ತು. ಹಾಗೂ ಮುಂಬರುವ ವರ್ಷದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ನೂತನ ವ್ಯವಸ್ಥೆಗೆ ಉತ್ತಮವಾಗಿ ಹೊಂದಿಕೊಳ್ಳುವುದರಿಂದ

ಕೃಪಾಂಕ ನೀಡುವ ಅವಶ್ಯಕತೆ ಇರುವುದಿಲ್ಲ ಎಂದು ನಿರ್ಧರಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಒಂದು ಬಾರಿಯ ಕ್ರಮವಾಗಿ, 2024ರ ಎಲ್ಲಾ 3 ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಿಗೆ ಎಲ್ಲಾ ವಿಷಯಗಳಲ್ಲಿ ನೀಡುವ ಕೃಪಾಂಕಗಳನ್ನು ಆಕರ್ಷಿಸಲು ಪಡೆಯಬೇಕಾದ ಅರ್ಹ ಅಂಕಗಳನ್ನು ಶೇ. 35 ರಿಂದ ಶೇ. 25ಕ್ಕೆ ಇಳಿಸಲಾಗಿದೆ ಮತ್ತು ಕೃಪಾಂಕದ ಪ್ರಮಾಣವನ್ನು ಶೇ. 10 ರಿಂದ ಶೇ. 20ಕ್ಕೆ ಹೆಚ್ಚಿಸಲಾಗಿತ್ತು. ಈ ಕ್ರಮದ ನಂತರ ಒಟ್ಟಾರೆ ಫಲಿತಾಂಶವು 73.40% ಆಗಿದ್ದು, ಈ ಕೆಳಗಿನಂತೆ ಕೋಷ್ಟಕದಂತಿರುತ್ತದೆ.

| 2024 SSLC EXAM 1 RESULT STATISTICS (CCERF, 20% GRACE PASSED) | | | |
|---|---|---|---|
| **GOVT** | **AIDED** | **UN-AIDED** | **TOTAL** |
| 72.58 % | 72.34 % | 86.57 % | 77.03 % |

**2023-24 ನೇ ಸಾಲಿನಲ್ಲಿಯೂ ಕೇವಲ ಶೇಕಡ 10% ಕೃಪಾಂಕದಂತೆ ಫಲಿತಾಂಶ ನೀಡಿದ್ದಲ್ಲಿ ಈ ಕೆಳಗಿನಂತೆ ಇರುತ್ತಿತ್ತು. ಇದನ್ನು 2024-25ನೇ ಸಾಲಿನ ಫಲಿತಾಂಶಕ್ಕೆ ಹೋಲಿಸಿದಲ್ಲಿ ಈ ಕೆಳಗಿನ ಹೆಚ್ಚಳವನ್ನು ಕಾಣಬಹುದು.**

| 2024 SSLC EXAM 1 RESULT STATISTICS (CCERF, 10% GRACE PASSED) | | | | |
|---|---|---|---|---|
| **YEAR** | **GOVT** | **AIDED** | **UN-AIDED** | **TOTAL** |
| 2023-24 | 53.3 % | 52.67 % | 72.9 % | 59.45 % |

2024-25 ನೇ ಸಾಲಿನ ಪರೀಕ್ಷೆ-1 ರ ಫಲಿತಾಂಶ (ಪ್ರತಿ ವರ್ಷ ನೀಡಲಾದ 10% ಗ್ರೇಸ್ ಅಂಕಗಳಂತೆ)

| SSLC 2025 EXAM 1 SCHOOL MANAGEMENT TYPE WISE RESULT [REGULAR FRESHER] | | | | |
|---|---|---|---|---|
| **YEAR** | **GOVT** | **AIDED** | **UN-AIDED** | **TOTAL** |
| 2024-25 | 62.7% | 58.97% | 75.59% | 66.14% |

2023-24 (10% ಗ್ರೇಸ್) ಮತ್ತು 2024-25 ನೇ ಸಾಲಿನ (10% ಗ್ರೆಸ್) ಫಲಿತಾಂಶದಲ್ಲಿ ವ್ಯತ್ಯಾಸ

| SSLC 2024 & 2025 EXAM 1 SCHOOL MANAGEMENT TYPE WISE RESULT DIFFERENCE [REGULAR FRESHER, 10% grace] | | | | |
|---|---|---|---|---|
| **YEAR** | **GOVT** | **AIDED** | **UN-AIDED** | **TOTAL** |
| 2023-24 | 53.30% | 52.67% | 72.90% | 59.45% |
| 2024-25 | 62.70% | 58.97% | 75.59% | 66.14% |
| **DIFFERENCE** | **9.4** | **6.3** | **2.69** | **6.69** |

**ಈ ಮೇಲಿನಂತೆ 2023-24 ನೇ ಸಾಲಿನ ಪರೀಕ್ಷೆ-1 (10% ಗ್ರೇಸ್) ಗಿಂತ 2024-25 ನೇ ಸಾಲಿನ ಪರೀಕ್ಷೆ-1 (10%**

| | | |
|---|---|---|
| | | **ಗ್ರೆಸ್) ಫಲಿತಾಂಶದಲ್ಲಿ ಒಟ್ಟಾರೆ 6.69 % ಹೆಚ್ಚಳ ಆಗಿರುವುದು ಕಂಡು ಬರುತ್ತಿದೆ.** |
| ಇ) | ಅನುದಾನಿತ ಶಾಲೆಗಳಲ್ಲಿ ದಾಖಲಾತಿ ಕುಸಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಅನುದಾನಿತ ಶಾಲೆಗಳಲ್ಲಿ ದಾಖಲಾತಿ ಕುಸಿತವಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಕಳೆದ ಮೂರು ವರ್ಷಗಳ ದಾಖಲಾತಿ ಮಾಹಿತಿ ಸಲ್ಲಿಸಿದೆ. |

| **ಕ್ರ.ಸಂ** | **ವರ್ಷ** | **ಮಕ್ಕಳ ದಾಖಲಾತಿ** |
|---|---|---|
| 1 | 2023-24 | 1231933 |
| 2 | 2024-25 | 1186214 |
| 3 | 2025-26 | 1109583 |

**ಸಂಖ್ಯೆ: ಇಪಿ 263 ಎಸ್ಇಎಸ್ 2025**

(ಎಸ್. ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**